ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/75/ಆಸ/ಸಿಎಎಸ್/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 28.11.2023.

## ಸುತ್ತೋಲೆ

ವಿಷಯ: ಸರ್ಕಾರಿ ಪ್ರಥಮ ದರ್ಜೆ/ಕಾನೂನು ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ/ ಸಹ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರುಗಳಿಗೆ ಯುಜಿಸಿ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ (ಸಿಎಎಸ್) ಶೈಕ್ಷಣಿಕ ಹಂತ 13ಎ ಮತ್ತು 14 ರ ಸ್ಥಾನೀಕರಣ ಮಂಜೂರಾತಿಗೆ ಸಂಬಂಧಿಸಿದಂತೆ ನಡೆಸುವ ಸಂದರ್ಶನದ ಬಗ್ಗೆ.

ಉಲ್ಲೇಖ: ಸಮಸಂಖ್ಯೆಯ ದಿನಾಂಕ: 03.11.2023 ರ ಸುತ್ತೋಲೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಅರ್ಹ ಸಹ/ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರುಗಳಿಗೆ ಶೈಕ್ಷಣಿಕ ಹಂತ 13ಎ ಮತ್ತು 14ನ್ನು ಮಂಜೂರು ಮಾಡಲು ದಿನಾಂಕ: 06.11.2023 ರಿಂದ ದಿನಾಂಕ: 18.12.2023 ರವರೆಗೆ ವಿವಿಧ ವಿಷಯಗಳಿಗೆ ಸಂದರ್ಶನ ಪ್ರಕ್ರಿಯೆಯನ್ನು ನಡೆಸಲು ಸುತ್ತೋಲೆ ಹೊರಡಿಸಲಾಗಿರುತ್ತದೆ.

ಆದರೆ ದಿನಾಂಕ: 04.12.2023 ರಿಂದ ಬೆಳಗಾವಿಯಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತು ಅಧಿವೇಶನ ಪ್ರಾರಂಭವಾಗಲಿದ್ದು ವಿಧಾನ ಸಭೆಯ ಕಾರ್ಯಕಲಾಪಗಳಿಗೆ ಇಲಾಖೆಯ ಅಧಿಕಾರಿಗಳು ನಿಯೋಜಿಸಲ್ಪಟ್ಟಿರುವ ಹಿನ್ನೆಲೆಯಲ್ಲಿ ಸಂದರ್ಶನ ಪ್ರಕ್ರಿಯೆಯನ್ನು ವಿಧಾನ ಸಭೆ ಹಾಗೂ ವಿಧಾನ ಪರಿಷತ್ತು ಅಧಿವೇಶನ ಮುಗಿದ ನಂತರ ಪ್ರಾರಂಭಿಸಲಾಗುವುದು ಈ ಹಿನ್ನೆಲೆಯಲ್ಲಿ ದಿನಾಂಕ: 04.12.2023 ರಿಂದ ನಡೆಯಬೇಕಾಗಿರುವ ಸಂದರ್ಶನ ಪ್ರಕ್ರಿಯೆ ಮುಂದೂಲ್ಪಟ್ಟಿದ್ದು ದಿನಾಂಕವನ್ನು ನಂತರ ಪ್ರಕಟಿಸಲಾಗುವುದು.

(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

ಇವರಿಗೆ :

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರುಗಳಿಗೆ – *ತಮ್ಮ ಕಾಲೇಜಿನ ಸಂಬಂಧಿಸಿದ ಸಹಾಯಕ/ಸಹ ಪ್ರಾಧ್ಯಾಪಕರುಗಳ ಗಮನಕ್ಕೆ ತರುವಂತೆ ಸೂಚಿಸಲಾಗಿದೆ.*
2. ಎಲ್ಲಾ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – *ಮಾಹಿತಿಗಾಗಿ.*
3. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – *ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.*